ಕರ್ನಾಟಕ ವಿಧಾನ ಪರಿಷತ್ತು

1	ಮಾನ್ಯ ಸದಸ್ಯರ ಹೆಸರು	ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
2	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	117
3	ಉತ್ತರಿಸುವ ದಿನಾಂಕ	01.02.2021
4	ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 3 ಲಕ್ಷಕ್ಕೂ ಅಧಿಕ ಬೀಡಿ ಕಾರ್ಮಿಕರಿದ್ದು, ತಮ್ಮ ಜೀವನೋಪಾಯಕ್ಕೆ ಬೀಡಿ ಕಟ್ಟುವ ಕಾರ್ಯವನ್ನು ನಂಬಿಕೊಂಡಿರುತ್ತಾರೆ; ಇವರಿಗೆ ಸರ್ಕಾರ ನಿಗಧಿಪಡಿಸಿದ ಕನಿಷ್ಟ ಕೂಲಿ (Minimum Wages Act)ಯು ಕಾರ್ಮಿಕ ಕಾಯ್ದೆಗೆ ಅನುಗುಣವಾಗಿ ನಿಗಧಿಗೊಳಿಸಲಾಗಿದೆಯೇ; ಮತ್ತು ಕಾರ್ಯಗತ ಗೊಳಿಸಲಾಗಿದೆಯೇ; ಈ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಅಂಕಿ ಅಂಶಗಳೊಂದಿಗೆ ವಿಸ್ತೃತ ಮಾಹಿತಿ ಒದಗಿಸುವುದು:	ಹೌದು. "ಬೀಡಿ ತಯಾರಿಕೆ" ಅನುಸೂಚಿತ ಉದ್ದಿಮೆಗೆ ಕನಿಷ್ಠ ವೇತನ ಕಾಯ್ದೆ 1948 ರ ಪ್ರಾವಧಾನಗಳನ್ವಯ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಲಾಗಿರುತ್ತದೆ. ನಿಕಟಪೂರ್ವದಲ್ಲಿ ಸರ್ಕಾರವು ದಿನಾಂಕ: 17-6-2017 ರಂದು ಕಾಯ್ದೆಯ ಕಲಂ 5(1)ಎ ಅನ್ವಯ ರಚಿಸಿದ ಸಮಿತಿಯ ಸರ್ವ ಸದಸ್ಯರ ಸಹಮತದೊಂದಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ, ದಿನಾಂಕ: 14-03-2018 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯಲ್ಲಿನ ದರಗಳನ್ನು ಅನುಷ್ಠಾನಗೊಳಿಸುವಂತೆ ಇಲಾಖೆಯ ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ದಿನಾಂಕ:26-3-2018, 3-8-2018, 29-8-2018, 14-9-2018, 11-10-2018, 4-12-2018, 31-1-2019, ಗಳಂದು ಕಛೇರಿ ಆದೇಶಗಳನ್ನು ಜಾರಿಗೊಳಿಸಲಾಗಿರುತ್ತದೆ. ಏತನ್ಮಧ್ಯೆ, ಸದರಿ ಅಧಿಸೂಚನೆಯನ್ನು *ಮೆ// ಮಂಗಳೂರು ಗಣೇಶ್ ಬೀಡಿ ವರ್ಕ್ಸ್ ಮೈಸೂರು* ಇವರು *ರಿಟ್ ಅರ್ಜಿ ಸಂಖ್ಯೆ: 8064/2019* ಹಾಗೂ *ಮೆ// ಕರ್ನಾಟಕ ಬೀಡಿ ಇಂಡಸ್ಟ್ರೀಸ್ ಅಸೋಸಿಯೇಷನ್ ಮಂಗಳೂರು* ಇವರು *ರಿಟ್ ಅರ್ಜಿ ಸಂಖ್ಯೆ: 40887/2018 ಗಳಲ್ಲಿ ರಿಟ್ ಅರ್ಜಿಗಳನ್ನು* ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿ ಪ್ರಶ್ನಿಸಿರುತ್ತಾರೆ. ಸದರಿ ಪ್ರಕರಣಗಳಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ***"The respondent is directed not to precipitate the matter till the next date of hearing"*** ಎಂದು ನಿರ್ದೇಶಿಸಿರುತ್ತದೆ. ಪ್ರಸ್ತುತ ಸದರಿ ಪ್ರಕರಣಗಳು ನ್ಯಾಯ ವಿಚಾರಣಾಧೀನ (Sub-Judice) ಇರುವುದರಿಂದ ಪ್ರಸ್ತುತ ದಿನಾಂಕ: 14-03-2018 ರ ಅಧಿಸೂಚನೆಯ ಕನಿಷ್ಠ ವೇತನ ದರಗಳನ್ನು ಅನುಷ್ಠಾನಗೊಳಿಸುವುದು ಸಾಧ್ಯವಾಗಿರುವುದಿಲ್ಲ

		ಹಾಗೂ ಈ ಹಂತದಲ್ಲಿ ಸರ್ಕಾರದ ವತಿಯಿಂದ ಕನಿಷ್ಠ ವೇತನ ಪಾವತಿಸುವ ಬಗ್ಗೆ ಕ್ರಮ ಜರುಗಿಸಲು ಅವಕಾಶಗಳಿರುವುದಿಲ್ಲ.
ಆ)	ಬೀಡಿ ಕಾರ್ಮಿಕ ಕಂಪನಿಗಳು ಬೀಡಿ ಕಾರ್ಮಿಕರಿಗೆ ಕಾನೂನು ರೀತಿ ಸಿಗಬೇಕಾದ ಗ್ರಾಚ್ಯುಟಿ ಮತ್ತು ಇತರೆ ಮೊತ್ತವನ್ನು ಸಂದಾಯ ಮಾಡದೇ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಹೊರತುಪಡಿಸಿ ಉಳಿದಂತೆ ಯಾವುದೇ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕ ಕಂಪನಿಗಳು ಬೀಡಿ ಕಾರ್ಮಿಕರಿಗೆ ಕಾನೂನು ರೀತಿ ಸಿಗಬೇಕಾದ ಗ್ರಾಚ್ಯುಟಿ ಮತ್ತು ಇತರೆ ಮೊತ್ತವನ್ನು ಸಂದಾಯ ಮಾಡದೇ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಬೀಡಿ ಕಾರ್ಮಿಕ ಕಂಪನಿಗಳು ಬೀಡಿ ಕಾರ್ಮಿಕರಿಗೆ ಕಾನೂನು ರೀತಿ ಸಿಗಬೇಕಾದ ಗ್ರಾಚ್ಯೂಟಿ ಮತ್ತು ಇತರೆ ಮೊತ್ತವನ್ನು ಸಂದಾಯ ಮಾಡದೇ ಇರುವ ಸಂಸ್ಥೆಗಳ/ಕಾರ್ಖಾನೆಗಳ ವಿರುದ್ಧ ಕಾರ್ಮಿಕ ಇಲಾಖೆಯಿಂದ ಕಳೆದ 3 ವರ್ಷಗಳ ಅವಧಿಯಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. ✓ ಉಪಧನ ಪಾವತಿ ಕಾಯ್ದೆ, 1972ರಡಿ ಒಟ್ಟು 280 ಅರ್ಜಿಗಳನ್ನು ದಾಖಲಿಸಲಾಗಿರುತ್ತದೆ. ✓ ಕನಿಷ್ಠ ವೇತನ ಪಾವತಿ ಕಾಯ್ದೆ, 1948ರಡಿ ಒಟ್ಟು 2,337 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.1,67,05,894.27 ಮೊತ್ತದ 94 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳ ಮುಂದೆ ದಾಖಲಿಸಲಾಗಿರುತ್ತದೆ. ✓ ವೇತನ ಪಾವತಿ ಕಾಯ್ದೆ, 1936ರಡಿ ಒಟ್ಟು 638 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.61,61,594/- ಮೊತ್ತದ 11 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳ ಮುಂದೆ ದಾಖಲಿಸಲಾಗಿರುತ್ತದೆ. ಮೇಲ್ಕಂಡಂತೆ ಉಪಧನ ಪಾವತಿ ಕಾಯ್ದೆ, 1972ರಡಿ, ಕನಿಷ್ಠ ವೇತನ ಪಾವತಿ ಕಾಯ್ದೆ, 1948ರಡಿ ಮತ್ತು ವೇತನ ಪಾವತಿ ಕಾಯ್ದೆ, 1936ರಡಿ ಸಕ್ಷಮ ಪ್ರಾಧಿಕಾರಿಗಳ ಮುಂದೆ ದಾಖಲಿಸಲಾದ ಕ್ಲೇಮ್ ಅರ್ಜಿಗಳಿಗೆ ಸಂಬಂಧಿಸಿದಂತೆ, ವಿಚಾರಣೆ ನಡೆಸಿ, ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ಪರಿಹಾರ ದೊರಕಿಸಿಕೊಡಲು ಕ್ರಮ ವಹಿಸಲಾಗುತ್ತಿದೆ.

ಕಾಇ 10 ಎಲ್‌ಡಬ್ಲ್ಯೂಎ 2021.

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು.